# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 532

**ಮಾನ್ಯ ಸದಸ್ಯರ ಹೆಸರು** : ಶ್ರೀ ಶಿವಣ್ಣ ಬಿ.ಎಸ್ ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 20.08.2026

**ಉತ್ತರಿಸುವ ಸಚಿವರು** : ಗೃಹ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನಗರಗಳಲ್ಲಿ ಬೀದಿ ದೀಪಗಳು, ಸಿಸಿಟಿವಿ ಕ್ಯಾಮೆರಾಗಳು ಹಾಗೂ ಪೊಲೀಸ್ ಗಸ್ತು ವಾಹನಗಳು (ಪಿಂಕ್ ಹೊಯ್ಸಳ) ಲಭ್ಯವಿದ್ದರೂ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಬೀದಿ ಕಾಮಣ್ಣರ ಕಿರುಕುಳ ಸಂಪೂರ್ಣವಾಗಿ ಕಡಿಮೆಯಾಗದಿರಲು ಕಾರಣಗಳೇನು; | ರಾಜ್ಯದ ನಗರದ ಪೊಲೀಸ್ ಠಾಣಾ ಮಟ್ಟದಲ್ಲಿ ಚೀತಾ, ಹೊಯ್ಸಳ ವಾಹನಗಳು, ರಾತ್ರಿ ಗಸ್ತು ಅಧಿಕಾರಿಗಳು ಠಾಣಾ ಸರಹದ್ದಿನಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ತಡರಾತ್ರಿ ಕೆಲಸ ಮುಗಿಸಿ ಹಿಂತಿರುಗುವ ಹಾಗೂ ಸಂಚರಿಸುವ ಮಹಿಳೆಯರಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಸುರಕ್ಷತಾ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಂಡಿರುವುದರಿಂದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕ್ರಮೇಣ ಇಳಿಮುಖವಾಗಿರುತ್ತವೆ.<br><br>ರಾಜ್ಯದಲ್ಲಿ ಮಹಿಳೆಯರ ಮತ್ತು ಅಪ್ರಾಪ್ತರ ರಕ್ಷಣೆ ಮತ್ತು ಸುರಕ್ಷತೆಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಗೃಹ ಇಲಾಖೆಯ ಸಂಯೋಗದೊಂದಿಗೆ "ಅಕ್ಕ ಪಡೆ"ಯನ್ನು ರಾಜ್ಯದ 05 ಕಮಿಷನರೇಟ್ ಮತ್ತು 31 ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದು, ಬೆಂಗಳೂರು ನಗರದಲ್ಲಿ ರಾಣಿ ಚೆನ್ನಮ್ಮ ಪಡೆಯನ್ನು ಸ್ಥಾಪಿಸಲಾಗಿರುತ್ತದೆ. |
| ಆ) | ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ ಮಹಿಳೆಯರು ಮತ್ತು ಅಪ್ರಾಪ್ತರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ಸ್ಥಿತಿಗತಿಯೇನು; ದುಡಿಯುವ ಮಹಿಳೆಯರ ಸುರಕ್ಷತೆಗಾಗಿ ಗೃಹ ಇಲಾಖೆಯು ಸಾರ್ವಜನಿಕ ಸ್ಥಳಗಳಲ್ಲಿ ರಹಸ್ಯ/ಡೆಕಾಯ್ ಕಾರ್ಯಾಚರಣೆಗಳನ್ನು (Decoy Operations) ನಡೆಸಲು ಯಾವುದೇ ವಿಶೇಷ ಯೋಜನೆಯನ್ನು ರೂಪಿಸಿದೆಯೇ; | ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ **(NCRB) 2024**ನೇ ಸಾಲಿನಲ್ಲಿ ಅಪರಾಧ ಅಂಕಿ ಅಂಶಗಳ ಪ್ರಕಾರ ಕರ್ನಾಟಕ ರಾಜ್ಯವು ಮಹಿಳೆಯರ ಮೇಲಿನ ಕ್ರೈಂ ರೇಟ್‌ನಲ್ಲಿ 10ನೇ ಸ್ಥಾನ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕ್ರೈಂ ರೇಟ್‌ನಲ್ಲಿ 11ನೇ ಸ್ಥಾನದಲ್ಲಿರುತ್ತದೆ.<br><br>• ದುಡಿಯುವ ಮಹಿಳೆಯರ ಸುರಕ್ಷತೆಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ರಹಸ್ಯ/ಡೆಕಾಯ್ ಕಾರ್ಯಾಚರಣೆಗಳನ್ನು (Decoy Operations) ನಡೆಸಲಾಗುತ್ತಿದೆ.<br><br>• ರಾಜ್ಯದಲ್ಲಿ ಮಹಿಳೆಯರ ಮತ್ತು ಅಪ್ರಾಪ್ತರ ರಕ್ಷಣೆ ಮತ್ತು ಸುರಕ್ಷತೆಗಾಗಿ "ಅಕ್ಕ ಪಡೆ" |

| | | |
|---|---|---|
| | | ಮತ್ತು ಬೆಂಗಳೂರು ನಗರದಲ್ಲಿ ರಾಣಿ ಚೆನ್ನಮ್ಮ ಪಡೆಯನ್ನು ಸ್ಥಾಪಿಸಲಾಗಿರುತ್ತದೆ.<br>• ತರ್ತು ಕರೆ 112, ಐ ಲ್ಯಾಂಡ್‌ಗಳು ಇತ್ಯಾದಿಗಳನ್ನು ಸ್ಥಾಪಿಸಿ ಮಹಿಳೆಯರು ಆಪತ್ತಿನಲ್ಲಿರುವ ಸಂದರ್ಭದಲ್ಲಿ ಮಾಹಿತಿ ಬಂದ ಕೂಡಲೇ ಕ್ರಮ ಕೈಗೊಳ್ಳುವ ವ್ಯವಸ್ಥೆ ಜಾರಿಯಲ್ಲಿರುತ್ತದೆ.<br>• ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಕತ್ತಲು ಪ್ರದೇಶಗಳನ್ನು ಗುರ್ತಿಸಿ ಅಂತಹ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಹಾಗೂ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು. |
| ಇ) | ರಾಜ್ಯದಲ್ಲಿ 'ಸುರಕ್ಷಿತ ನಗರ ಯೋಜನೆ' (Safe City Project) ಮತ್ತು 'ನಿರ್ಭಯಾ ನಿಧಿ' ಅಡಿಯಲ್ಲಿ ಲಭ್ಯವಿರುವ ಅನುದಾನವೆಷ್ಟು; ನಗರಗಳ ಕತ್ತಲೆ ಪ್ರದೇಶಗಳನ್ನು (Dark Spots) ಗುರುತಿಸಿ ಸಿಸಿಟಿವಿ ಹಾಗೂ ದೀಪಗಳನ್ನು ಅಳವಡಿಸಲು ಕೈಗೊಂಡಿರುವ ಕ್ರಮಗಳೇನು ಮತ್ತು ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಾಗೂ ಬಳಕೆಯಾಗದೆ ಬಾಕಿ ಉಳಿದಿರುವ ಅನುದಾನದ ವಿವರವೇನು; | **ರಾಜ್ಯದಲ್ಲಿ 'ಸುರಕ್ಷಿತ ನಗರ ಯೋಜನೆ' (Safe City Project) ಮತ್ತು 'ನಿರ್ಭಯಾ ನಿಧಿ'ಯ ಅನುದಾನದ ವಿವರಗಳು ಈ ಕೆಳಕಂಡಂತಿದೆ:**<br>• ಬೆಂಗಳೂರು ನಗರದ ಕತ್ತಲೆ ಪ್ರದೇಶ ಮತ್ತು ಹೆಚ್ಚು ಪ್ರಕರಣಗಳು ದಾಖಲಾಗುವ ಸೂಕ್ಷ್ಮ ಪ್ರದೇಶಗಳನ್ನು ಗುರ್ತಿಸಿ ಅಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು, ಸೇಫ್ಟಿ ಐ ಲ್ಯಾಂಡ್ ಗಳನ್ನು ಅಳವಡಿಸಲಾಗಿದೆ ಹಾಗೂ ಹೊಯ್ಸಳ ವಾಹನಗಳ ಹಾಲ್ಟಿಂಗ್ ಪಾಯಿಂಟ್ (Halting point) ಗಳನ್ನು ಗುರ್ತಿಸಿ ನಿಯೋಜಿಸಲಾಗಿದೆ.<br>ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಯೋಜನೆಯನ್ನು ಒಟ್ಟು ರೂ.667.00 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಪಾಲು 60% ರೂ.400.20 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು 40% ರೂ.266.80 ಕೋಟಿ ಸಹಭಾಗಿತ್ವದಲ್ಲಿ ಭರಿಸಲಾಗಿರುತ್ತದೆ.<br>**ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗೆ ಬಿಡುಗಡೆಗೊಂಡ ಅನುದಾನದ ವಿವರ ಕೆಳಗಿನಂತಿವೆ:** |

| Release order Date | Installment | Funds Received: Central Share (In Cr.) | State Share (In Cr.) | Total (In Cr.) | Expenditure In Cr | | Remaining |
|---|---|---|---|---|---|---|---|
| | | | | | | | ಉಳಿಕೆ ಮೊತ್ತ ಒಟ್ಟು 160 |
| 01-01-2024 | 3rd Installment | 100.05 | 66.7 | 166.75 | 2023-2024 | 101.53 | ಮುಂದಿನ ಮೂರುವ |
| 29-03-2025 | 4th Installment | 25 | 16.48 | 41.48 | 2024-2025 | 113.51 | ವರ್ಷಗಳ ತ್ರೈಮಾಸಿ |
| 15-05-2025 | 5th Installment | 38.35 | 25.57 | 63.92 | 2025-2026 | 56.7 | ಬಿಡುಗಡೆ |
| 25-03-2026 | 6th Installment | 10.79 | 7.39 | 18.18 | 2026-2027 | 8.85 | ನಿರ್ವಹಣ ಕಾಯ್ದಿರಿ |
| Total | | 174.19 | 116.14 | 290.33 | Total | 280.59 | |

| | | |
|---|---|---|
| | | **ರಾಜ್ಯದ ನಗರಗಳಲ್ಲಿ ಕತ್ತಲೆ ಪ್ರದೇಶಗಳನ್ನು (Dark Spots) ಗುರುತಿಸಿ ಸಿಸಿಟಿವಿ ಹಾಗೂ ದೀಪಗಳನ್ನು ಅಳವಡಿಸಲು ಈ ಕೆಳಗಿನಂತೆ ಕ್ರಮ ಕೈಗೊಂಡಿದೆ:**<br>• ರಾಜ್ಯದ ಮಹಿಳಾ ಸುರಕ್ಷತೆ ಬಗ್ಗೆ ಎಲ್ಲಾ ನಗರದ ಪ್ರಮುಖ ಕಡೆಗಳಲ್ಲಿ ಮಹಿಳಾ ಸುರಕ್ಷತೆ ಬಗ್ಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಸಿಟಿ ಕಂಟ್ರೋಲ್ ನಲ್ಲಿ ನಿಗಾವಹಿಸಲಾಗುತ್ತದೆ.<br>• ಸಂತ್ರಸ್ತರಿಗೆ ವೈದ್ಯಕೀಯ, ಕಾನೂನು ಸಲಹೆ ಮತ್ತು ಸಮಾಲೋಚನೆ ಮುಂತಾದ ಸಹಾಯವನ್ನು ಒಂದೇ ಸ್ಥಳದಲ್ಲಿ ಒದಗಿಸಲು ಜಿಲ್ಲಾ ಮಟ್ಟದಲ್ಲಿ ಸಖಿ-ಒನ್ ಸ್ಟಾಪ್ ಕೇಂದ್ರಗಳಲ್ಲಿ ಒದಗಿಸಲಾಗುತ್ತಿದೆ.<br>• ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವ ಪ್ರದೇಶಗಳು ಹಾಗೂ ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುವ ಮಹಿಳೆಯರು ಸಂಚರಿಸುವ ಮಾರ್ಗಗಳಲ್ಲಿ ಅಗತ್ಯವಿರುವಂತೆ ಪೊಲೀಸ್ ಗಸ್ತು ಹೆಚ್ಚಿಸಲಾಗಿದೆ.<br>• ಕೆಲಸದ ಸ್ಥಳಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ CCTV, ಸಮರ್ಪಕ ಬೆಳಕು, ಭದ್ರತಾ ಸಿಬ್ಬಂದಿ ಮತ್ತು ಪ್ರವೇಶ-ನಿರ್ಗಮನ ನಿಯಂತ್ರಣ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಲಾಗುತ್ತಿದೆ. |
| ಈ) | ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಶೀಘ್ರ ವಿಲೇವಾರಿಗೆ ಹಾಗೂ ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | **ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಶೀಘ್ರ ವಿಲೇವಾರಿಗೆ ಈ ಕೆಳಗಿನಂತೆ ಕ್ರಮ ಕೈಗೊಂಡಿದೆ:**<br>• ಮಹಿಳೆಯರ ಮೇಲಿನ ಅಪರಾಧಗಳಾದ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಪ್ರಕರಣಗಳನ್ನು ಹಿರಿಯ ಅಧಿಕಾರಿಗಳು ನಿಯಮಿತವಾಗಿ ಪರಿಶೀಲನೆಯೊಂದಿಗೆ ತನಿಖೆಯನ್ನು ನಿಯಮಾನುಸಾರ ಕ್ರಮಬದ್ಧವಾಗಿ ನಿರ್ವಹಿಸಿ 60 ದಿನಗಳೊಳಗೆ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗುತ್ತಿದೆ.<br>• ಜಿಲ್ಲಾ ಪೊಲೀಸ್ ಘಟಕಗಳು/ ಕಮೀಷನರೇಟ್‌ಗಳಿಗೆ ಅತ್ಯಾಧುನಿಕ Mobile Forensic Vans ಗಳನ್ನು ಒದಗಿಸಲಾಗಿದ್ದು, ಇವುಗಳ ಮೂಲಕ ಅಪರಾಧ ಸ್ಥಳದಲ್ಲಿಯೇ |

| | | | |
|---|---|---|---|
| | | | ವೈಜ್ಞಾನಿಕ ಹಾಗೂ ಡಿಜಿಟಲ್ ಸಾಕ್ಷ್ಯಗಳ ಸಂಗ್ರಹಣೆ ನಡೆಸಲಾಗುತ್ತಿದೆ.<br>• ಪ್ರಕರಣದ ಸಾಕ್ಷಿಗಳು ಯಾವುದೇ ಬೆದರಿಕೆಗಳಿಗೆ ಹೆದರದೆ, ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ಸಾಕ್ಷ್ಯ ಹೇಳಲು ಪ್ರೋತ್ಸಾಹಿಸಲಾಗುತ್ತದೆ.<br>• ವಿಚಾರಣಾ ಹಂತದಲ್ಲಿರುವ ಇಂತಹ ಗಂಭೀರ ಪ್ರಕರಣಗಳನ್ನು ಪಿಐ, ಎಸಿಪಿ ದರ್ಜೆಯ ಅಧಿಕಾರಿಗಳು ಖುದ್ದಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.<br>• ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ Women Help Desk ಗಳನ್ನು ಸ್ಥಾಪಿಸಲಾಗಿದೆ.<br>• ನ್ಯೂ ಕ್ರಿಮಿನಲ್ ಲಾ ಅಡಿಯಲ್ಲಿ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು 60 ದಿನಗಳೊಳಗೆ ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿ ಸಲ್ಲಿಸಲಾಗುತ್ತಿದೆ ಹಾಗೂ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿರುತ್ತದೆ. |

ಸಂಖ್ಯೆ: ಹೆಚ್‌ಡಿ 25 ಎಸ್‌ಡಿಎನ್ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು